† ಶ್ರೀ ಎ. ಆರ್. ಬದರೀನಾರಾಯಣ.—ಬಡ್ಜೆಟ್ಟನ್ನು ಫ್ರೇಂ ಮಾಡಿರುವುದು ಭಾಷಾವಾರು ಆಧಾರದ ಮೇಲೆ ಅಲ್ಲವೆಂದು ಹೇಳಿದೆ.

ಶ್ರೀ ಕೆ. ಶ್ರೀರಾಮುಲು.—ನಾನು ಒಂದು ಆಧಾರದ ಮೇಲೆ ಪ್ರಶ್ನೆ ಕೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ತಾವು ಉತ್ತರ ಕೊಟ್ಟಿರುವ ಪ್ರಕಾರ ಕನ್ನಡವನ್ನು ಯಾವ ಮಟ್ಟಕ್ಕೆ ಬೆಳಸಬೇಕೆಂದು ನಮ್ಮ ಇಲಾಖೆಯ ಅಧಿಕಾರಿಗಳಿಗೇ ಗೊತ್ತಿಲ್ಲವೆಂದು ಹೇಳಿದರೆ ಅದನ್ನು ಒಪ್ಪುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಇದುವರೆಗೂ ಇರತಕ್ಕ ಪದ್ಧತಿ ಪ್ರಕಾರ ಭಾಷಾವಾರು ಆಧಾರದ ಮೇಲೆ ಬಡ್ಜೆಟ್ಟನ್ನು ಫ್ರೇಂ ಮಾಡಲಿಲ್ಲ. ತಾವು ಹೇಳಿದಮೇಲೆ ಈಗ ಆ ವಿಚಾರದ ಬಗ್ಗೆ ಗಮನಕೊಡಲಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಎಲ್ಲಾ ಶಾಲೆಗಳಲ್ಲಿಯೂ ಕನ್ನಡವನ್ನು ಕಡ್ಡಾಯವಾಗಿ ಮಾಡುವುದರ ಬಗ್ಗೆ ತಾವೇನಾದರೂ ಯೋಚನೆ ಮಾಡಿದ್ದೀರಾ? ಅದನ್ನು ಕಡ್ಡಾಯವಾಗಿ ಕಲಿಸಬೇಕೆಂಬುದು ನಿಮ್ಮ ನೀತಿಯಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ್.—ಕನ್ನಡವನ್ನು ಕಡ್ಡಾಯವಾಗಿ ಮಾಡಬೇಕೆಂಬುದೇ ಸರ್ಕಾರದ ನೀತಿ.

RUNNING OF PRIMARY, SECONDARY SCHOOLS OF HASSAN TOWN IN RENTAL BUILDINGS

773. Sri K. H. Hanume Gowda (Hassan).—

Will the Minister for Education be pleased to state.—

(*a*) the number of Primary and Secondary Schools of Hassan Town which are being run in rental buildings ;

(*b*) whether there is a Scheme before Government to provide buildings to these Schools ;

(*c*) if so, the period within which all schools will be provided with buildings ?

Sri A. R. Badarinarayana.—Minister for Education

(*a*) 8 (Eight).

(*b*) The Government have issued an Order recently about school buildings in towns and cities. According to this order, if the Local Bodies construct buildings for the schools, the Government will take them on rental basis.

Besides, if the Local Bodies or Phylonthrophists donate the site and money required for school buildings, the Government will take up the construction work.

(*c*) if the abovementioned help is provided, the work will be taken up as early as possible.

ಶ್ರೀ ಕೆ. ಎಚ್. ಹನುಮೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕಾದರೆ, ಸ್ಥಳದ ಜನರೂ, ಪಂಚಾಯತಿಯವರೂ ಮತ್ತು ತಾಲ್ಲೂಕು ಬೋರ್ಡಿನವರೂ ಸಹ ಎಷ್ಟೆಷ್ಟು ಹಣವನ್ನು ಕೊಡಬೇಕೆಂದು ಸರ್ಕಾರದ ಆದೇಶವಿದೆ ? ಅದೇ ರೀತಿಯಲ್ಲಿ ಟೌನುಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಬೇಕಾದರೆ ಎಷ್ಟೆಷ್ಟು ಹಣವನ್ನು ಕೊಡಬೇಕೆಂದು ಕಡ್ಡಾಯವಿದೆ ? ಹಾಗಿದ್ದರೆ ಎಷ್ಟು ಕೊಡಬೇಕಾಗುತ್ತದೆ ?

† ಶ್ರೀ ಎ. ಆರ್. ಬದರಿನಾರಾಯಣ್.—೫೨ ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಸ್ಕೂಲ್ ಬಿಲ್ಡಿಂಗಿಗೋಸ್ಕರ ಇಟ್ಟಿದೆ. ಅದನ್ನು ಐದನೆಯ ಒಂದು ಭಾಗವನ್ನು ಪಟ್ಟಣಗಳಲ್ಲಿ ಖರ್ಚುಮಾಡ ಬೇಕೆಂದಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ನನ್ನ ಪ್ರಶ್ನೆ ಆದಲ್ಲ, ಹಳ್ಳಿ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಆದಾಯ ಕಡಿಮೆ ಇರುತ್ತದೆ. ಅಂಥಾದ್ದರಲ್ಲಿ ಅಲ್ಲಿ ಇಷ್ಟು ಭಾಗ ಕೊಡಬೇಕೆಂದು ನಿರ್ಣಯಮಾಡಿರುವಾಗ, ಅದೇ ರೀತಿಯಲ್ಲಿ ಟೌನಿನಲ್ಲಿಯೂ ಅದರ ಬಗೆ ಇಷ್ಟೇ ಕೊಡಬೇಕೆಂದು ಪರಾಮರ್ಶಿಸಲಿ.

ಶ್ರೀ ಡಿ. ದೇವರಾಜ್ ಅರಸ್.—ಅದು ಒಂದು ಕೆಲಸ ಮಾಡಬೇಕೆಂದಿದ್ದೇವೆ. ಆ ನೀತಿಯನ್ನು ಬದಲಾಯಿಸಲಾಗಿದೆ. ಪಟ್ಟಣಗಳಲ್ಲಿ ಅದರ ಬಗ್ಗೆ ನಿರ್ಧಾರಮಾಡಿ ಎಷ್ಟು ಕೊಡಬೇಕೆಂಬುದು ಬೇರೆ. ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೂ ಮತ್ತು ಲೋಕಲ್ ಬೋರ್ಡ್‌ಗಳಿಗೂ ಯಾವ ರೀತಿಯಾದರೂ ಹಣ ಕೊಡಬೇಕೆಂಬ ಯೋಚನೆ ಮಾಡಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಣವನ್ನು ಎಷ್ಟು ಕೊಡುತ್ತಿದ್ದೀರಿ ?

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು):— ಇದಕ್ಕೆ ನಾಲ್ಕೈದು ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅವರು ಕಟ್ಟಡಕ್ಕೋಸ್ಕರ ಸ್ಥಳೀಯವಾಗಿ ದುಡ್ಡು ಖರ್ಚು ಮಾಡಬೇಕೆಂದು ಹೇಳಿದ್ದಾರೆ.—ಎರಡು ಸಾವಿರ ರೂಪಾಯಿ ಕೊಟ್ಟು ಇಷ್ಟು ಕಟ್ಟಡ ಆಗಲಿಲ್ಲ ಎಂದರೆ ಮುಂದೆ ಹೇಗೆ ಕಟ್ಟಬೇಕು ? ನಾವು ಕಡ್ಡಾಯ ಮಾಡುತ್ತಿದ್ದೇವೆ. ಇದರಿಂದೇನಾಗುತ್ತದೆ, ಇಷ್ಟು ದುಡ್ಡು ಕೊಟ್ಟಿರಿ, ಆ ರೀತಿಯಾಗಿ ಕಟ್ಟಿದ್ದೇವೆ, ಇನ್ನೂ ೩ ಸಾವಿರ ರೂಪಾಯಿ ಬೇಕಾಗುತ್ತದೆ ಎಂಬುದಾಗಿ ಹೇಳುತ್ತಾರೆ. ಆದರೂ ತೊಂದರೆಯಾಗುತ್ತದೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ನಾವು ಕೊಡುವ ೨ ಸಾವಿರ ರೂಪಾಯಿಗಳನ್ನು ಕೊಡೋಣ; ಐದಾರು ಸಾವಿರ ರೂಪಾಯಿ ಕಂಟ್ರಾಕ್ಟರಿಗೆ ಹೋಗುವುದರಿಂದ, ಕೆಲಸಕ್ಕೆ ಬಾರದೇ ಇರುವ ಕೆಲಸವಾಗುತ್ತದೆ. ಸಂಬಂಧಪಟ್ಟ ಜನಗಳು ತಿನ್ನುವುದಕ್ಕೆ ಇಲ್ಲದಿದ್ದರೂ ಅವರ ಮಕ್ಕಳ ವಿದ್ಯಾಭಿವೃದ್ಧಿಗೋಸ್ಕರ ದುಡ್ಡು ಕೊಡುತ್ತಿದ್ದಾರೆ. ಆದೇ ದುಡ್ಡಿಗೆ ಈಗ ಒಂದು ಸ್ಕೂಲ್ ಬಿಲ್ಡಿಂಗ್ ಕಟ್ಟಬಹುದು. ಳಿತಿ ಮಕ್ಕಳಿಗೆ ಎಷ್ಟು ಆಗುತ್ತದೆಂದು ಲೆಕ್ಕ ಹಾಕುತ್ತಾರೆ. ಸಾಮ್ಯಾವಾಗಿ ೧೦೦ ಮಕ್ಕಳಿಗೆ ಒಂದು ಸ್ಕೂಲ್ ಬಿಲ್ಡಿಂಗ್ ಕಟ್ಟಬೇಕಾದರೆ ಸಾವಿರಾರು ರೂಪಾಯಿಗಳು ಆಗುತ್ತದೆ. ಅಂಥಾದ್ದರಲ್ಲಿ ಅಲ್ಲಿ ಕುರಿಮಂದೆ ಇದ್ದಹಾಗೆ ಇರುತ್ತದೆ. ಅಲ್ಲಿ ಮಾಸ್ಟರ್ಸ್ ಬೀಗ ಹಾಕಿಕೊಂಡಿರುತ್ತಾರೆ. ಆದ್ದರಿಂದ ಅಲ್ಲಿ ಇಂತಹ ಒಂದು ಕಟ್ಟಡಕ್ಕೋಸ್ಕರ ಸುಮಾರು ೫ ಸಾವಿರ ರೂಪಾಯಿಗಳು ಇಲ್ಲದಿದ್ದರೆ, ಅದನ್ನು ಕಟ್ಟುವುದಕ್ಕಾಗುವುದಿಲ್ಲ. ನಮ್ಮ ಹಳ್ಳಿಗಳಲ್ಲಿ ಇರತಕ್ಕ ಮಾಸದ ಮನೆಗಳು ಏನಿವೆಯೋ ಆ ರೀತಿ ಕಟ್ಟುವುದು ಆದರೆ, ಇದೇ ದುಡ್ಡಿಗೆ ನಾಲ್ಕೈದು ಸಾವಿರ ರೂಪಾಯಿಗಳು ಖರ್ಚು ಮಾಡಿದರೆ ಸಾಮಾನ್ಯವಾಗಿ ೧೫೦ ಮಕ್ಕಳು ಕೂತುಕೊಳ್ಳುವುದಕ್ಕೆ ಅನುಕೂಲವಾಗುವಂಥ ಒಂದು ಕಟ್ಟಡವನ್ನು ಕಟ್ಟುವುದಕ್ಕೆ ಸಾಧ್ಯ. ಈ ಸೂಚನೆಯನ್ನು ಕಡ್ಡಾಯವಾಗಿ ಕೊಟ್ಟಿದೆ. ಕೆಲವು ಪ್ರದೇಶಗಳಲ್ಲಿ ಹಳ್ಳಿಗಳಲ್ಲಿ ಕಟ್ಟುವ ಹಾಗೆ ಕಟ್ಟಿದರೆ ಸಾಕು. ಇಂತಹ ಟೈಪ್ ಡಿಜೈನ್ ಪ್ರಕಾರವೇ ಕಟ್ಟಬೇಕು, ಇಟ್ಟಿಗೇನೇ ಹಾಕಬೇಕು ಮಂಗಳೂರು ಹೆಂಚೇ ಬೇಕು ಎಂಬುದಾಗಿ ಹೇಳಿದರೆ ಅದು ಆಗುವುದಿಲ್ಲ. ಅದನ್ನು ಸ್ವಲ್ಪ ಬದಲಾವಣೆ ಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಆಧಾರದ ಮೇಲೆ ಯೂನಿಫಾರಂ ಪಾಲಿಸಿ ಮಾಡುತ್ತಾರೆಂದು ಕಾಣುತ್ತದೆ. ಲೋಕಲ್ ಬಾಡೀಸ್, ಮುನಿಸಿಪಲ್ ಏರಿಯಾ ಹಾಗೂ ರೂರಲ್ ಏರಿಯಾ ಎಂಬುದಾಗಿ ಭಿನ್ನಭಾವ ಇಲ್ಲದೆ ಒಂದು ಹೊಸ ಧೋರಣೆಯನ್ನು ತಾಳಿದ್ದಾರೆ. ಯಾವುದೇ ಕಟ್ಟಡ ಕಟ್ಟಲಿ, ಅದು ಮುನಿಸಿಪಲ್ ಏರಿಯಾಗಳಲ್ಲಾಗಲೀ, ರೂರಲ್ ಏರಿಯಾಗಳಲ್ಲಿ ಆಗಲೀ, ಪ್ರೈಮರಿ ಸ್ಕೂಲುಗಳನ್ನು ಕಟ್ಟುವಾಗ ಇದು ಮುನಿಸಿಪಾಲಿಟಿಗಳಲ್ಲಿಯೂ ಯೂನಿಫಾರಂ ಆಗಿ ಜಾರಿಗೆ ಬರುತ್ತದೆಯೇ ? ಹಳ್ಳಿಗಳಿಗೇ ಬೇರೆ, ಪಟ್ಟಣಗಳಿಗೇ ಬೇರೆ ಎಂದು ಹೇಳುತ್ತಿರಾ ?

ಶ್ರೀ ಡಿ. ದೇವರಾಜ್ ಅರಸ್.—ಪಟ್ಟಣಗಳಲ್ಲಿ ಹಾಗೆ ಮಾಡುವುದು ಕಷ್ಟವಾಗುತ್ತದೆ. ರೂರಲ್ ಏರಿಯಾಗಳಲ್ಲಿ ಆ ರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ,